ರಂಜಿತವಾಗಲಿಲ್ಲ. ಅವಳ ಒಳತೋಟಿಯ ತಾಕಲಾಟವನ್ನು ಯಾರೂ ಅರಿಯಲಿಲ್ಲ. ನಿರ್ಲಿಪ್ತ ಭಾವದಲ್ಲಿದ್ದ ಅವಳನ್ನು ಕಂಡು ಪೋಷಕರು ತಾವು ಬೆಳೆಸಿದ್ದ ಪುತ್ರಿ ತಮ್ಮನ್ನು ಬಿಟ್ಟು ಪತಿಗೃಹಕ್ಕೆ ತೆರಳಬೇಕಾಗಿದ್ದುದರ ವ್ಯಥೆ ಅವಳನ್ನು ಕಾಡುತ್ತಿರಬೇಕೆಂದು ಎಣಿಸಿದರು. ಅವರನ್ನು ಸಂತಸ ಹಾಗೂ ದುಃಖ ಎರಡೂ ಆವರಿಸಿದ್ದವು. ವಿವಾಹದ ಶುಭ ವೇಳೆ ಆಗಮಿಸಿತು. ಮೀರಾ ಬಾಲ್ಯದಲ್ಲಿ ಕಂಡಂಥ ವರನ ಕಡೆಯ ದಿಬ್ಬಣವಾಗಿತ್ತು.

ರಾಜ ಕುವರ ತಕ್ಕ ಉಡುಗೆ ತೊಡುಗೆಗಳಿಂದ ಅಲಂಕೃತನಾಗಿ ರಾಜ ಪದ್ಧತಿಯಂತೆ ಗಜದ ಮೇಲೆ ರಾರಾಜಿತನಾಗಿ ವೈಭವೋಪೇತವಾದ ಮೆರವಣಿಗೆಯಲ್ಲಿ ವಧುಗೃಹಕ್ಕೆ ಆಗಮಿಸಿದನು. ಗರ್ನಾಲುಗಳು ಸಿಡಿದವು. ಶಹನಾಯಿ ವಾದನದ ಹಾಗೂ ನಂತ್ರಗಳ ಹಿಮ್ಮೇಳದಲ್ಲಿ ವರನು ಸಾಲಂಕೃತಳಾದ ವಧುವಿನ ಲಲಾಟದಲ್ಲಿ ಸಿಂಧೂರವಿರಿಸಿ, ಪರಸ್ಪರ ಜಯ ಮಾಲೆಗಳನ್ನು ಕೊರಳುಗಳಲ್ಲಿ ಧರಿಸಿ, ಅಗ್ನಿಸಾಕ್ಷಿ, ಗುರುಹಿರಿಯರ ಬಂಧು ಬಾಂಧವರ ಸಮ್ಮುಖದಲ್ಲಿ ಸತಿಪತಿಗಳಾಗಿ ಸಪ್ತಪದಿಗಳನ್ನಿರಿಸಿದರೂ, ಮೀರಾ ಯಾವುದರ ಪರಿವಿಲ್ಲದಂತೆ ಮನ ಮೋಹಕನ ನೆನಪುಗಳಲ್ಲಿ ವಿಹರಿಸುತ್ತಾ ಯಾಂತ್ರಿಕವೆಂಬಂತೆ ವಿವಾಹದಲ್ಲಿ ಭಾಗಿಯಾಗಿದ್ದಳು. ಪತಿಗೃಹಕ್ಕೆ ತೆರಳುವಾಗಲೂ ನಂದಕುಮಾರನ ಸವಿ ನೆನಪುಗಳನ್ನು ಹೊತ್ತು ತರಳಿದಳು. ಮೆಟ್ಟಿದ ಮನೆಯಲ್ಲಿ ಅಲ್ಲಿನ ರೀತಿ, ರಿವಾಜುಗಳಿಗೆ ಹೊಂದಿಕೊಳ್ಳಲಾಗಲಿಲ್ಲ.

ಅಲ್ಲಿನ ಕುಲದೇವಿ ತುಳಜಾಬಾಯಿಯ ಪೂಜೆ, ಪುನಸ್ಕಾರಗಳಲ್ಲಿ ಪಾಲುಗೊಳ್ಳದೆ, ಪತಿ ದೈವವೆಂದು ನಂಬಿದ್ದ ಪುಂಡರೀಕಾಕ್ಷನನ್ನು ಆರಾಧಿಸುತ್ತಾ ಅವನಲ್ಲಿಯೇ ತನ್ಮಯಳಾಗಿದ್ದಳು. ಹೀಗಿರಲೊಮ್ಮೆ ಪತಿ ಭೋಜರಾಜ, ಸಂಸಾರದ ವ್ಯಾಮೋಹವಿರದ ಪತ್ನಿಯಲ್ಲಿ, ನಿನಗೇಕೆ ಯಾವುದನ್ನೂ ಹಚ್ಚಿಕೊಳ್ಳದ ವೈರಾಗ್ಯವೆಂದು ಪ್ರಶ್ನಿಸಿದಾಗ, ಮೀರಾ ಬಾಲ್ಯದಲ್ಲಿಯೇ ಶ್ರೀ ಕೃಷ್ಣನೊಡನೆ ಗಾಂಧರ್ವ ವಿವಾಹವಾಗಿರುವುದು. ಅವನನ್ನು ಪತಿ ಎಂದು ಕಾಯಾ ವಾಚವಾಗಿ ಸ್ವೀಕರಿಸಿರುವೆನು. ಬೇರಾರನ್ನೂ ಪತಿಯ ಸ್ಥಾನದಲ್ಲಿರಿಸ ಲಾರೆ ಎಂದು ತನ್ನ ಮನದಾಳದಲ್ಲಿದ್ದ ಅನಿಸಿಕೆಯನ್ನು ಹೊರ ಹೊಮ್ಮಿಸಿದಳು. ಆಗ ಭೋಜರಾಜನು ಉಕ್ಕಿ ಬಂದ ನಗೆಯೊಂದಿಗೆ 'ಏನು ಆ ಪರಮಾತ್ಮ ನಿನ್ನ ಪತಿಯಾಗಲು ಸಾಧ್ಯವೇ? ನಾವೆಲ್ಲರೂ ಯಕಶ್ಚಿತ್ ಮಾನವರು, ಆ ಜಗನ್ನಾಥನು ಆಡಿಸಿದಂತೆ ಆಡುವವರು' ಎಂದು ತಾನು ನಂಬಿಕೆಯಿರಿಸಿದ್ದ ಆಧ್ಯಾತ್ಮಿಕತೆಯ ಭಾವದೊಂದಿಗೆ ನುಡಿದಾಗ, ಮೌನಿಯಾದಳು ಮೀರಾ. ಪತಿ ಅವಳ ಮನೋಕಾಮನೆಗೆ ಸ್ಪಂದಿಸಿ ಅವಳ ನಡೆ ನುಡಿಗೆ ಯಾವ ಕುಂದು ಬಾರದಂತೆ ನಡೆದನು.

ಪತ್ನಿಗಾಗಿಯೇ ಕೃಷ್ಣ ಮಂದಿರ ಸಂಸ್ಥಾಪನೆಗೊಂಡಿತು. ವಿವಾಹದ ವೇಳೆಯಲ್ಲಿ ತನಗೆ ನೀಡಿದ್ದ ವಸ್ತ್ರಾಭರಣಗಳಿಗಿಂತಲೂ ಮಿಗಿಲಾದ ಮೌಲ್ಯ ಕಟ್ಟಲಾಗದ ಪತಿಯಿಂದ ದೊರೆತ ಬಳುವಳಿಯಾಗಿತ್ತು. ಸಂಪ್ರೀತಳಾದ ಮೀರಾ, ಪತಿಯನ್ನು ಆದರದಿಂದ ಗೌರವಿಸುತ್ತಿದ್ದಳು. ಆದರೆ ಪರಿವಾರದ ಇತರರು, ದೇವರು ವರ ನೀಡಿದರೂ ಅರ್ಚಕರು ನೀಡುವುದುದಿಲ್ಲವೆಂಬ ನಾಣ್ನುಡಿಯಂತೆ, ಅವಳ ಅಂತರಂಗವನ್ನು ಅರಿಯದೆ, ಬಹಿರಂಗವಾಗಿ ದೂಷಿಸುತ್ತಿದ್ದರೂ ಮೀರಾ ವಿಚಲಿತಳಾಗದೆ, ಘನ ಶ್ಯಾಮನ ಆರಾಧನೆ ಯಲ್ಲಿಯೇ ತನ್ನನ್ನು ತೊಡಗಿಸಿಕೊಂಡಿದ್ದಳು. ಮಾವ ಕದನದಲ್ಲಿ ಮಡಿದಾಗ, ಭೋಜರಾಜನೂ ಪಿತನನ್ನು ಹಿಂಬಾಲಿಸಿದನು. ಆ ಪರಿವಾರದಲ್ಲಿ ಏಕೈಕ ಆಪ್ತಮಿತ್ರನಂತಿದ್ದ ಹಾಗೂ ದಾರಿದೀಪದಂತಿದ್ದ ಪತಿ ಗತಿಸಿದಾಗ, ಮೀರಾ ಮಮ್ಮಲ ಮರುಗಿದಳು.

ಭೋಗ ಭಾಗ್ಯಗಳ ಅರಮನೆ ಅವಳಿಗೆ ಸೆರೆಮನೆಯಾಗಿತ್ತು. ಬಾಲ್ಯದಿಂದಲೇ ಒಗ್ಗೂಡಿಸಿಕೊಂಡಿದ್ದ ಕವಿ ಪ್ರಜ್ಞೆ ಮತ್ತಷ್ಟು ಜಾಗೃತವಾಗಿ ಗಿರಿಧರ ಗೋಪಾಲನ ಕುರಿತು ಗೀತೆಗಳನ್ನು ವಿರಚಿಸುತ್ತಾ, ಭಜಿಸುತ್ತಾ ಕುಣಿಯುತ್ತಾ ದೇಗುಲದಲ್ಲಿಯೇ ಹೆಚ್ಚು ಸಮಯವನ್ನು ಕಳೆಯುತ್ತಿದ್ದಳು. ಕೃಷ್ಣ ಮಂದಿರಗಳು ಎಲ್ಲಿದ್ದರೂ ಅಲ್ಲಿಗೆ ಧಾವಿಸಿ, ಅಲ್ಲಿಯೇ ಇರುತ್ತಿದ್ದಳು. ಕೃಷ್ಣ ಭಕ್ತಿಗೆ ಮಾರು ಹೋಗಿ ಅನೇಕ ಭಕ್ತರು ಅವಳ ಅನುಯಾಯಿಗಳಾದರು.

ಪತಿಯ ಸಹೋದರ ರಾಣಾ ವಿಕ್ರಮ್ ಸಿಂಗ್ ಸಂಪೂರ್ಣವಾಗಿ ರಾಜ್ಯಾಡಳಿತವನ್ನು ವಹಿಸಿದ್ದು, 'ಅತ್ತಿಗೆ, ನಮ್ಮ ರೀತಿ ರಿವಾಜುಗಳಂತೆ ನೀವು ನಡೆದುಕೊಳ್ಳುತ್ತಿಲ್ಲ, ಸಹೋದರನನ್ನು ಪತಿಯೆಂದು ಭಾವಿಸಲಿಲ್ಲ. ರಜಪೂತ ವಂಶದ ನಾರಿಯರು ಪರಮ ಪತಿವ್ರತೆಯರು ಪರದೈವವೆಂದು ತಿಳಿದಿರುವರು. ಪತಿ ಗತಿಸಿದ ನಂತರದಲ್ಲಿ ಸತಿ ಹೋಗುವ ಸಹಗಮನ ಪದ್ಧತಿಯನ್ನು ಉಲ್ಲಂಘಿಸಿದ್ದು, ಮಂದಿರಗಳಲ್ಲಿ ಹಾಡುತ್ತಾ ಕುಣಿಯುತ್ತಾ, ನಮ್ಮ ಅರಮನೆಯ ಮನೆತನದ ಗೌರವಕ್ಕೆ ಕಳಂಕ ತಂದಿರುವಿರಿ. ಘೋರ ಅಪರಾಧ ವನ್ನೇ ಎಸಗಿರುವಿರಿ. ಅದಕ್ಕೆ ತಕ್ಕ ನಿಯಮಗಳಂತೆ ನಿಮಗೆ ಶಿಕ್ಷೆಗಳನ್ನು ನೀಡಲೇಬೇಕು, ಕೇವಲ ಭಾವ ಮೈದುನನಾಗಿ ಹೇಳುತ್ತಿಲ್ಲ, ಅರಸನಾದ ನನ್ನ ಆಜ್ಞೆ ಎಂದು ಆಜ್ಞಾಪಿಸಿದನು. ಮೀರಾಳಿಗೆ ಅನೇಕ ಕ್ರೂರ ಶಿಕ್ಷೆಗಳು ವಿಧಿಸಲಾಯಿತು. ಕಾರ್ಕೋಟಕ ವಿಷ ಪ್ರಾಶನ ಮಾಡಿಸಿದರೂ ಆ ಕೇಶವನ ಕೃಪಾ ಕಟಾಕ್ಷದಲ್ಲಿ ವಿಷ ಅಮೃತವಾಗಿ ಪರಿಣಮಿಸಿತು. ಶ್ರೀ ಕೃಷ್ಣ ಸಾದೃಶ್ಯ ನಾಗದಿದ್ದರೂ ಅದೃಶ್ಯನಾಗಿ, ತನ್ನಲ್ಲಿ ಅಪಾರ ಪ್ರೀತಿ, ವಿಶ್ವಾಸಗಳನ್ನಿರಿಸಿದ್ದ ಭಕ್ತಳನ್ನು ಸಂರಕ್ಷಿಸುತ್ತಿದ್ದನು.

ಮುಂದೆ ತವರಿಗೆ ತೆರಳಿದಳು. ಅಲ್ಲಿ ಪತಿ ಗೃಹವನ್ನು ತ್ಯಜಿಸಿ ಬಂದಿರುವಳೆಂದು ಯಾರೂ ಅವಳನ್ನು ಆದರಿಸಲಿಲ್ಲ. ಮಥುರಾ, ಬೃಂದಾವನ ದ್ವಾರಕೆಗಳತ್ತ ಹೊರಳಿದಳು. ಅಲ್ಲಿ ಮಹಾ ಸಂತರಾದ ಜೀವ ಗೋಸಾಯಿ ಯವರನ್ನು ಸಂದರ್ಶಿಸಲೇಬೇಕೆಂಬ ಹಂಬಲದಲ್ಲಿ ಅವರಿದ್ದ ಮಠಕ್ಕೆ ತೆರಳಿದಾಗ, ಅವರ ಅನುಯಾಯಿಗಳು, ನಮ್ಮ ಗುರುಗಳು ಯಾವ ಮಹಿಳೆಯನ್ನೂ ಕಾಣಲಿಚ್ಛಿಸುವುದಿಲ್ಲ ಎಂದು ತಿಳಿಸಿದರು. ಆಗ ಮೀರಾ ಎದೆ ಗುಂದದೆ, 'ನನ್ನ ದೃಷ್ಟಿಕೋನದಲ್ಲಿ ಗಿರಿಧರನು ಮಾತ್ರ ಪುರುಷ. ಮತ್ತಿತರರನ್ನು ಗೋಪಿಕಾ ಸ್ತ್ರೀಯರೆಂದೇ ಪರಿಭಾವಿಸುವೆನು' ಎಂದು ತಿಳಿಸಿದಾಗ ಅನುಯಾಯಿಗಳು ತಮ್ಮ ಗುರುವಿಗೆ ಸಂದೇಶವನ್ನು ತಲುಪಿಸಿದರು. ಗುರುಗಳು ಹೊರಗೆ ಬಂದು ಮೋಹನನ ಭಕ್ತೆಗೆ ಕರಗಳ ಜೋಡಿಸಿ ವಂದಿಸಿದಾಗ ಮೀರಾ ಅವರಿಗೆ ಪ್ರತಿವಂದಿಸಿದಳು. ಅವರ ಸಾಂಗತ್ಯದಲ್ಲಿ ಕೃಷ್ಣ ಪ್ರಜ್ಞೆಯ ಚಿಂತನ ಮಂಥನಗಳಲ್ಲಿ ಅನುಭಾವ ಪಡೆದಳು. ಅವರ ಶಿಷ್ಯಳಾದಳು. ಭಕ್ತಿ ಪಥದಲ್ಲಿ ಹೆಜ್ಜೆಗಳನಿರಿಸಬೇಕೆಂದರೆ ಗುರುವನ್ನು ಆಶ್ರಯಿಸಲೇ ಬೇಕೆಂಬ ತತ್ವವನ್ನು ನುಡಿದಿರುವವಳು ಸಂತ ಮೀರಾಬಾಯಿ.

ಸಹೋದರರ, ಬಾಂಧವರ ತೊರೆದು ಸಾಧುಗಳ ಸಂಗದಲ್ಲಿ ಲೋಕವನ್ನೇ ಮರೆತೆ ಎಂದು ಕೃಷ್ಣ ಭಜನೆಯ ಸಂತ ಮೀರಾ. ಹತ್ತು, ಹಲವಾರು ಭಜನೆಗಳ ರಚಿಸಿದಳು ತನ್ನ ಪ್ರಭು ಗಿರಿಧರನನ್ನು ಕುರಿತು ಗುರುಗಳು ನೀಡಿದ್ದ ಏಕತಾರಿ ವಾದನ ಒಂದು ಹಸ್ತದಲ್ಲಿ, ಮತ್ತೊಂದರಲ್ಲಿ ತಾಳವನ್ನು ಹಿಡಿದು ಹಾಡುತ್ತಾ, ಕುಣಿಯುತ್ತಾ ನಲಿವಿನೋಕುಳಿಯಲ್ಲಿ ಮಿಂದಳು ಆಂತರಿಕವಾಗಿ, ಬಾಹ್ಯವಾಗಿ ವಿರಾಗಿನಿಯ ವೇಷದಲ್ಲಿ. ಬಾಲ್ಯದ ಮುಂಜಾವಿನಿಂದ ಪಾರಮಾರ್ಥಿಕ ವಾದ ಹಾದಿಯಲ್ಲಿ ಕ್ರಮಿಸುತ್ತಾ, ದ್ವಾರಕ ನಗರಿಯ ಮಂದಿರದಲ್ಲಿ ತನ್ನ ಅರವತ್ತು ವಸಂತಗಳ ಆಸುಪಾಸಿನಲ್ಲಿ ದ್ವಾರಕೆಯ ಮಂದಿರದಲ್ಲಿ ಸಂಕೀರ್ತನೆಯಲ್ಲಿ ತೊಡಗಿದ್ದಳು.

ಅಂದು ಮೀರಾಳ ಪಾಲಿಗೆ ಚೈತ್ರೋದಯವಾಗಿತ್ತು. ವೃಕ್ಷಗಳ ರೆಂಬೆ ಕೊಂಬೆಗಳಲ್ಲಿ ಪಂಚಮದಲ್ಲಿ ಕುಕಿಲ ಸ್ವರ, ಆಗಸದಲ್ಲಿ ರೆಕ್ಕೆ ಹರವಿ ಸ್ವಚ್ಛಂದತೆಯಲ್ಲಿ ದೂರ ದೂರಕ್ಕೆ ಹಾರಾಡುತ್ತಿದ್ದ ಪಕ್ಷಿಗಳ ಇಂಪಿನ ಇಂಚರಗಳಲ್ಲಿ ಹಸಿರುಸಿರುಗಳ ಕಂಪಿನ ಮಂದಾನಿಲದ ಸಮ್ಮಿಳಿತದಲ್ಲಿ ಗಂಧರ್ವ ಲೋಕವೇ ಸೃಷ್ಟಿಯಾದಂತಿತ್ತು.

ಅಶರೀರವಾಣಿಯ ನವಿರಾದ ಸ್ವರ 'ನನ್ನ ಬಳಿಗೆ ಬಾ' ಎಂಬ ಕರೆ ಕರ್ಣಗಳಿಗೆ ಅಮೃತಸಿಂಚನವನ್ನು ಎರೆದಂತಾಗಿ ತನ್ನ ಗಿರಿಧರನಲ್ಲಿ ಲೀನವಾದಳು ಭಕ್ತೆ ಮೀರಾಬಾಯಿ. ಅವಳು ಹಾಡುತ್ತಿದ್ದ 'ಮಾರೋರೇ ಗಿರಿಧರ್ ಗೋಪಾಲ್ ದೂ ಸರೋನ ಕೋಯಿ, ರಾಮ್ ರತನ್ ಧನ್ ಪಾಯೊ' ಮುಂತಾದ ಗೀತೆಗಳು ಮಥುರಾ, ಬೃಂದಾವನ, ದ್ವಾರಕೆಗಳ ಹಾದಿ ವೀದಿಗಳಲ್ಲಿ ಮಂದಿರಗಳಲ್ಲಿ, ಗಲ್ಲಿಗಲ್ಲಿಗಳಲ್ಲಿ, ವನಬನಗಳಲ್ಲಿ ಹಾಗೂ ಭಕ್ತ ಮಾನಸಗಳಲ್ಲಿ ಅನುರಣಿಸುತ್ತಿರುವವು.

ಇಂದಿಗೂ ಮೀರಾ ಜನಿಸಿದ್ದ, ನೆಲೆಸಿದ್ದ ಅರಮನೆಗಳು ಗತ ವೈಭವದ ಕುರುಹುಗಳಿಲ್ಲದಂತೆ, ಶಿಥಿಲಾವಸ್ಥೆಯಲ್ಲಿ ಕಂಡು ಬರುವುದು. ಸಂತ ಮೀರಾಬಾಯಿಯ ನೆನಪುಗಳಿಗಾದರೂ ಸ್ಪಂದಿಸಿ, ಪುನರೋದ್ಧಾರ ವಾಗದಿದ್ದಲ್ಲಿ, ಮುಂದಿನ ಪೀಳಿಗೆಗೆ ಕೇವಲ ಅವಶೇಷಗಳೂ ಉಳಿಯಲಾರದೇನೋ ಎಂಬ ಸಂದೇಹ ಕಾಡುವುದು. ■